ಕೈಮಗ್ಗ ಮತ್ತು ಯಂತ್ರ ಮಗ್ಗಗಳ ಉದ್ಯಮ

560 (612) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ಉದ್ಯಮ ಕ್ಷೇತ್ರದಲ್ಲಿ ತೊಡಗಿರುವ ಕಾರ್ಮಿಕರು ಮತ್ತು ಉದ್ಯಮಿಗಳ ಹಿತರಕ್ಷಣೆಗಾಗಿ ಸರ್ಕಾರದ ಅಭಿವೃದ್ಧಿ ಯೋಜನೆಗಳೇನು?

ಆ) ನಶಿಸುತ್ತಿರುವ ಕೈಮಗ್ಗ ಕ್ಷೇತ್ರದ ಉಳಿವಿಗಾಗಿ ಸರ್ಕಾರ ಪುನಃಶ್ಚೇತನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆಯೇ; ಹಾಗಿದ್ದಲ್ಲಿ ಆ ಕುರಿತಾದ ವಿವರಗಳೇನು;

ಇ) ಕೈಮಗ್ಗ ಕ್ಷೇತ್ರದಲ್ಲಿ ತೊಡಗಿಸಿಕೊಂಡವರಿಗೆ ನೂತನ ವಸ್ತ್ರವಿನ್ಯಾಸ, ತಂತ್ರಜ್ಞಾನ ಮತ್ತಿತರ ಆಧುನಿಕ ರೀತಿ ನೀತಿಗಳನ್ನು ಅನುಸರಿಸಿ ಅಭಿವೃದ್ಧಿ ಹೊಂದಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್. ವರ್ತೂರು ಪ್ರಕಾಶ್ (ಜವಳಿ ಸಚಿವರು) :

ಅ) ರಾಜ್ಯ ಸರ್ಕಾರವು ರಾಜ್ಯದ ಕೈಮಗ್ಗ ಹಾಗೂ ವಿದ್ಯುತ್ ಮಗ್ಗಗಳ ಉದ್ಯಮ ಕ್ಷೇತ್ರದಲ್ಲಿ ತೊಡಗಿರುವ ಕಾರ್ಮಿಕರು ಮತ್ತು ಉದ್ಯಮಿಗಳ ಹಿತರಕ್ಷಣೆಗಾಗಿ ಈ ಕೆಳಕಂಡ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

(ಅ)	
ಕ್ರ ಸಂ.	**ಕೈಮಗ್ಗ ಕ್ಷೇತ್ರದ ಯೋಜನೆಗಳು**
1	ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆ– ಸಹಕಾರ ಸಂಘಗಳು
2	ಕೈಮಗ್ಗ ನೇಕಾರರಿಗೆ ಗುಂಪು ವಿಮಾ ಯೋಜನೆ
3	ಕೈಮಗ್ಗ ನೇಕಾರರಿಗೆ ಆರೋಗ್ಯ ವಿಮಾ ಯೋಜನೆ
4	ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯ
5	ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ
6	ದುರ್ಬಲ ವರ್ಗದವರಿಗೆ ಸೀರೆ ಪಂಚೆ ವಿತರಣೆ
7	ಕೈಮಗ್ಗ ನೇಕಾರರ ಮಿತವ್ಯಯ ನಿಧಿ ಯೋಜನೆ
8	ಸುವರ್ಣ ವಸ್ತ್ರನೀತಿ ಯೋಜನೆ 2008–13

9	ನೇಕಾರರ ವಿಶೇಷ ಪ್ಯಾಕೇಜ್
	ಶೇಕಡ 3 ರ ಬಡ್ಡಿ ದರದಲ್ಲಿ ಸಾಲದ ಮೇಲಿನ ಬಡ್ಡಿ ಸಹಾಯಧನ
	ಮಿತವ್ಯಯ ನಿಧಿ ಯೋಜನೆಯಡಿ ಬಡ್ಡಿ
	ಕಚ್ಚಾಮಾಲು ಖರೀದಿಗೆ ಸಹಾಯಧನ
11	ನೇಕಾರರ ವಿಶೇಷ ಪ್ಯಾಕೇಜ್ -- ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ
12	ನೇಕಾರರಿಗೆ ವಸತಿ ಕಾರ್ಯಾಗಾರ
(ಆ)	**ವಿದ್ಯುತ್ ಮಗ್ಗ ಉದ್ಯಮ ಕ್ಷೇತ್ರದಲ್ಲಿ ಅಭಿವೃದ್ಧಿ ಯೋಜನೆಗಳು**
1	ನೇಕಾರರಿಗೆ ವಸತಿ ಕಾರ್ಯಾಗಾರ
2	ಎರಡು ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ
3	ವಿದ್ಯುತ್ ಮಗ್ಗಗಳಿಗೆ ಸಹಾಯ
4	ವಿದ್ಯುತ್ ಮಗ್ಗ ಸಹಕಾರ ಸಂಘಗಳಿಗೆ ಶೇರು ಹಣ ಸಹಾಯ
5	ವಿದ್ಯುತ್ ಮಗ್ಗ ಸಹಕಾರ ಸಂಘಗಳಿಗೆ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದ ಯೋಜನೆ.
6	ವಿದ್ಯುತ್ ಮಗ್ಗ ನೇಕಾರರಿಗೆ ಸಮೂಹ ವಿಮಾ ಯೋಜನೆ

ಆ) ನಶಿಸುತ್ತಿರುವ ಕೈಮಗ್ಗ ಕ್ಷೇತ್ರದ ಉಳಿವಿಗಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ "ಪುನಃಶ್ಚೇತನ, ಸುಧಾರಣೆ ಮತ್ತು ಪುನರ್‌ರಚನೆ. ಪ್ಯಾಕೇಜ್" (Revival, Reform & Restructuring Package) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ.

ಈ ಕಾರ್ಯಕ್ರಮದಡಿ

1. ದಿನಾಂಕ: 31-03-2010 ರಲ್ಲಿದ್ದಂತೆ ಕೈಮಗ್ಗ ಸಹಕಾರ ಸಂಘಗಳ ನಷ್ಟವನ್ನು ಕೇಂದ್ರ/ರಾಜ್ಯ ಸರ್ಕಾರಗಳು ಭರಿಸುತ್ತವೆ.
2. ಕೈಮಗ್ಗ ನೇಕಾರರಿಗೆ ಕ್ರೆಡಿಟ್ ಕಾರ್ಡ್‌ಗಳನ್ನು ನೀಡಿ ವಾಣಿಜ್ಯ ಬ್ಯಾಂಕುಗಳಿಂದ ಪ್ರತಿ ನೇಕಾರರಿಗೆ ಗರಿಷ್ಟ ರೂ.50,000/-ಗಳ ಸಾಲವನ್ನು ಒದಗಿಸಲಾಗುತ್ತದೆ. ಈ ಸಾಲಕ್ಕೆ 3 ವರ್ಷಗಳ ಅವಧಿಗೆ ಶೇಕಡ 3ರ ಬಡ್ಡಿ ಸಹಾಯ ಧನವನ್ನು ಹಾಗೂ

ರೂ.4,200/–ಗಳ ಮಾರ್ಜಿನ್ ಮನಿಯನ್ನು ಒದಗಿಸ ಲಾಗುತ್ತದೆ.

3. ಕೈಮಗ್ಗ ನೇಕಾರರಿಗೆ ಯಾರ್ನ್ ಪಾಸ್ ಪುಸ್ತಕಗಳನ್ನು ವಿತರಿಸಿ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದ ಮುಖಾಂತರ ಶೇಕಡ 10ರ ಸಹಾಯಧನ ನೀಡಿ ಕಚ್ಚಾ ಮಾಲನ್ನು ಸರಬರಾಜು ಮಾಡಲಾಗುವುದು.

ಇ)

1. ಕೈಮಗ್ಗ ಕ್ಷೇತ್ರದಲ್ಲಿ ತೊಡಗಿಸಿಕೊಂಡವರಿಗೆ ನೂತನ ವಸ್ತ್ರ ವಿನ್ಯಾಸ, ತಂತ್ರಜ್ಞಾನ ಮತ್ತಿತರ ಆಧುನಿಕ ರೀತಿ ನೀತಿ ಗಳನ್ನು ಅನುಸರಿಸಿ ಅಭಿವೃದ್ಧಿ ಹೊಂದಲು ಮುಂದುವರೆದ ಕೈಮಗ್ಗ ತರಬೇತಿ ಸಂಸ್ಥೆ ಜಮಖಂಡಿ, ಬಾಗಲಕೋಟೆ ಜಿಲ್ಲೆ ಇಲ್ಲಿ ನೂತನ ವಸ್ತ್ರ ವಿನ್ಯಾಸ, ತಂತ್ರಜ್ಞಾನದ ಬಗ್ಗೆ ಅಲ್ಪಾವಧಿ ತರಬೇತಿ ನೀಡಲಾಗುತ್ತಿದೆ.
2. ವಸ್ತ್ರ ವಿನ್ಯಾಸ, ಡೈಯಿಂಗ್ ಮತ್ತು ಪ್ರಿಂಟಿಂಗ್ ವಿಷಯ ಗಳಲ್ಲಿ ಆಧುನಿಕ ತಂತ್ರಜ್ಞಾನ ಮತ್ತು ರೀತಿ ನೀತಿಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ನೇಕಾರರ ಸಾಂದ್ರತೆ ಇರುವ ಸ್ಥಳಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದ ಸಂಸ್ಥೆಯಾದ ನೇಕಾರರ ಸೇವಾ ಕೇಂದ್ರ, ಬೆಂಗಳೂರು, ಇವರ ಮುಖಾಂತರ ನೀಡಲಾಗುತ್ತಿದೆ.

ಕೆ.ಆರ್.ಎಸ್. ನಾಲೆಗಳ ಆಧುನೀಕರಣ

614 (930) ಶ್ರೀ ಸುರೇಶ್‌ಗೌಡ (ನಾಗಮಂಗಲ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ನೀರಾವರಿ ನಿಗಮದ ಮೂಲಕ ಕೆ.ಆರ್.ಎಸ್. ಅಚ್ಚುಕಟ್ಟು ವ್ಯಾಪ್ತಿಯಲ್ಲಿ ವಿಶ್ವೇಶ್ವರಯ್ಯ ನಾಲೆ, ಕೌಡ್ಲೆ ಉಪಶಾಲೆ, ಚಿಕ್ಕಬಳ್ಳಿ ಪಿಕಪ್ ಇತರೆ ನಾಲೆಗಳನ್ನು ಆಧುನೀಕರಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಈವರೆವಿಗೆ ಕೈಗೊಂಡಿರುವ ಕ್ರಮಗಳೇನು;